ಗ್ರಾಮ ವಿಕಾಸ ಯೋಜನೆ

1400(913); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ರಾಜ್ಯದಲ್ಲಿ ಗ್ರಾಮ ವಿಕಾಸ ಯೋಜನೆ ಜಾರಿಯಾಗಿದೆಯೇ;

ಆ) ಸದರಿ ಯೋಜನೆಗೆ ನಿಗದಿಪಡಿಸಿರುವ ಅನುದಾನವೆಷ್ಟು; ಹಾಗೂ ಇದುವರೆವಿಗೂ ಖರ್ಚು ಮಾಡಿರುವಂತಹ ವೆಚ್ಚವೆಷ್ಟು;

ಇ) ಸದರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಹೊರಡಿಸಿ ದಿನಾಂಕ 25-06-2015 ರಂದು ಯೋಜನೆಯ ಮಾರ್ಗಸೂಚಿಯನ್ನು ಬಿಡುಗಡೆಗೊಳಿಸಲಾಗಿದೆ.

ಆ)

- 3 ಷರ್ವಗಳ ಅವಧಿಯೊಳಗೆ ಪೂರ್ಣಗೊಳಿಸುವ ಗ್ರಾಮ ವಿಕಾಸ ಯೋಜನೆಯನ್ನು ಒಟ್ಟಾರೆ ರೂ. 750.00 ಕೋಟಿಗಳ ವೆಚ್ಚದಲ್ಲಿ ರೂಪಿಸಲಾಗಿದೆ. ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಎಸ್‌ಸಿ, ಎಸ್‌ಟಿ ಜನಸಂಖ್ಯೆಯನ್ನೊಳಗೊಂಡ 2 ಗ್ರಾಮಗಳೂ ಸೇರಿದಂತೆ ಒಟ್ಟು 5 ಗ್ರಾಮಗಳಿಗೆ ರೂ. 3.75 ಕೋಟಿಗಳನ್ನು ನಿಗದಿಪಡಿಸಲಾಗಿದೆ.
- 2 ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಎಸ್‌ಸಿ, ಎಸ್‌ಟಿ ಜನಸಂಖ್ಯೆಯನ್ನೊಳಗೊಂಡ

3 ಗ್ರಾಮಗಳೂ ಸೇರಿದಂತೆ 8 ಗ್ರಾಮಗಳಿಗೆ ರೂ. 6.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

- ಈ ಸಾಲಿನಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ರೂ. 327.63 ಕೋಟಿಗಳೂ ಸೇರಿದಂತೆ ಹಾಗೂ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಗೂ ಸೇರಿ ರೂ. 445.30 ಕೋಟಿಗಳನ್ನು ನಿಗಧಿಪಡಿಸಲಾಗಿದೆ.

- ಈ ಪೈಕಿ ರೂ. 109.60 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಪ್ರಾರಂಭಿಕ ಶಿಲ್ಕು ಸೇರಿದಂತೆ ಒಟ್ಟು ರೂ. 146.26 ಕೋಟಿಗಳ ಅನುದಾನದಲ್ಲಿ ರೂ. 16.74 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇ) ಗ್ರಾಮ ವಿಕಾಸ ಯೋಜನೆಯಡಿ ಮಾರ್ಗಸೂಚಿಯ ಪ್ರಕಾರ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು 2ನೇ ಅಕ್ಟೋಬರ್, 2016ರ ಅಂತ್ಯಕ್ಕೆ ಮುಕ್ತಾಯಗೊಳಿಸಲು ವೇಳಾ ಪಟ್ಟಿಯನ್ನು ರೂಪಿಸಲಾಗಿದ್ದು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ–1

ಗ್ರಾಮ ವಿಕಾಸ ಯೋಜನೆಯ ಅನುಷ್ಠಾನ ವೇಳಾಪಟ್ಟಿ

ಕ್ರ ಸಂ.	ಚಟುವಟಿಕೆಗಳು	ನಿಗಧಿಪಡಿಸಿದ ಅವಧಿ	ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿಗಳು
1	ಗ್ರಾಮಗಳ ಆಯ್ಕೆ – ಸಂಬಂಧಪಟ್ಟ ಶಾಸಕರ ಶಿಫಾರಸ್ಸಿನೊಂದಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸುವುದು ಮತ್ತು ಸರ್ಕಾರಕ್ಕೆ ಸಲ್ಲಿಸುವುದು.	15.07.2015	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
2	ಜಿಲ್ಲೆಗಳಿಂದ ಬಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ನೀಡುವುದು.	20.07.2015	ಸರ್ಕಾರದ ಮಟ್ಟದಲ್ಲಿ.
3	ಆಯ್ಕೆಯಾದ ಗ್ರಾಮಗಳಲ್ಲಿ ವಾರ್ಡ್ / ಗ್ರಾಮ ಸಭೆ ಜರುಗಿಸಿ ಅಭಿವೃದ್ಧಿ ಯೋಜನೆಯನ್ನು ಸಾರ್ವಜನಿಕರ ಸಹಭಾಗಿತ್ವ ಮತ್ತು ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ತಯಾರಿಸುವುದು. ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆಯುವುದು.	14.08.2015	ಗ್ರಾಮ ಪಂಚಾಯತ್.
4	ಸಿವಿಲ್ ಕಾಮಗಾರಿಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಸುವುದು.	31.08.2015	ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು.

5	ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡುವುದು.	05.09.2015	ಸಕ್ಷಮ ತಾಂತ್ರಿಕ ಅಧಿಕಾರಿಗಳು.
6	ಅಭಿವೃದ್ಧಿ ಯೋಜನೆಗೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು.	05.09.2015	ಗ್ರಾಮ ಪಂಚಾಯತ್ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
7	ಟೆಂಡರ್ ಪ್ರಕ್ರಿಯೆಗಳು	27.09.2015	ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು.
8	ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಆರಂಭ ಮಾಡುವುದು. ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು.	02.10.2015	ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು.
9	ಮಾಹೆವಾರು ನಿಗಧಿತ ನಮೂನೆಯಲ್ಲಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.	ಪ್ರತಿ ಮಾಹೆ	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.

10	ಹಣ ಬಿಡುಗಡೆ	ತ್ರೈಮಾಸಿಕ	ಸರ್ಕಾರವು ಪ್ರಗತಿಯನ್ನಾಧರಿಸಿ ಜಿಲ್ಲಾ ಪಂಚಾಯತ್‌ಗಳ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಚೆಕ್/EFMs ಮೂಲಕ ಹಣ ಬಿಡುಗಡೆ.
11	ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿ	ಪ್ರಗತಿಯನ್ನಾಧರಿಸಿ	ಗ್ರಾಮ ಪಂಚಾಯತ್‌ಗಳು ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣ ಪಾವತಿಸಬೇಕು.
12	ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಮುಕ್ತಾಯಗೊಳಿಸುವುದು.	02.10.2016	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು.